ನೋಟಿಸ್.

ತಾರೀಖು 17ನೆ ಏಪ್ರೆಲ್ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಸ್ರ 1906ನೆ ಇಸವಿ ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನ್ 64—65ನೆ ನಂಬರು ಸೆಕ್ಷನ್ ಪ್ರಕಾರ ಒಂದು ವರುಷದ ಒಳಗೆ ಊರಿನ ಅನೇಕ ಭಾಗಗಳಲ್ಲಿ ನೂತನವಾಗಿ ಕಟ್ಟಿ ಅಭಿವೃದ್ಧಿಯಾಗಿರುವ ಕಟ್ಟಡಗಳ ಪ್ರದೇಶ ಮತ್ತು ಅಂಗಡಿಗಳ ಅಂದಾಜು ಮತ್ತು ಕಂದಾಯ ನಿಷ್ಕರ್ಷೆಯು ಪೂರೈಸಿರುತ್ತೆ. ಮ್ಯುನಿಸಿಪಲ್ ಕಲೆಕ್ಷನ್ ಇಲಾಖೆಯಲ್ಲಿ ಆಸಕ್ತರಾದ ಜನಗಳಿಗೆ ನೋಡುವದಕ್ಕೋಸ್ಕರ ಕಂದಾಯ ನಿಷ್ಕರ್ಷೆ ಪುಸ್ತುಕಗಳು ಕಚೇರಿ ದಿನಗಳಲ್ಲಿ ಮತ್ತು ಕಚೇರಿ ತೆರವಿರುವ ಕಾಲದಲ್ಲಿ ದೊರಿಯುತ್ತವೆ. ಈ ಕೆಳಗೆ ನಮೂದಾಗುವ ಮೇರೆ ಆಯಾದಿನ ಮತ್ತು ಕಾಲಗಳಲ್ಲಿ ಮೇಲೆ ನಮೂದಿಸಿರುವ ಅಂದಾಜ ಮತ್ತು ಕಂದಾಯ ನಿಷ್ಕರ್ಷೆಯನ್ನು ವೈಸ್ ಪ್ರೆಸಿಡೆಂಟರು ಪುನರ್ವಿಮರ್ಶೆ ಮಾಡುವರು. ಆಯಾಯ ಡಿವಿಜ್ಞಗೆ ನಿರ್ಧರಿಸಿರುವ ತಾರೀಖಿಗೆ 3 ದಿನ ಮುಂಚಿತವಾಗಿ ಪುನರ್ವಿಮರ್ಶೆಗಾಗಿ ಬರುವ ದರಖಾಸ್ತುಗಳು ಸ್ವೀಕರಿಸಲ್ಪಡುತ್ತವೆ.

ಜಂಜರ್ ನಂ.	ಡಿವೀಜ್ಞಗಳ ಹೆಸರು.	ಗೊತ್ತುಮಾಡಿರುವ ತಾರೀಖು.	ಕಾಲ.
1	ಪ್ಯಾಲೆಸ್ ಡಿವೀಜ್ಞ ...	1909ನೆ ಮೇ 25ನೆ ಮಂಗಳವಾರ ...	$7\frac{1}{2}$ ಇಂದ $9\frac{1}{2}$ ವರಿವಿಗೆ
2	ಬಳೇಪೇಟೆ ಡಿವೀಜ್ಞ ...	ಡಿಟೋ 28ನೆ ಶುಕ್ರವಾರ ...	ಡಿಟೋ
3	ಮನವರ್ತಿಪೇಟೆ ಡಿವೀಜ್ಞ ...	ಡಿಟೋ 31ನೆ ಸೋಮವಾರ ...	ಡಿಟೋ
4	ಹಲಸೂರುಪೇಟೆ ,, ...	1909ನೆ ಜೂನ್ 2ನೆ ಬುಧವಾರ ...	ಡಿಟೋ
5	ನಗರ್ತಪೇಟೆ ,, ...	ಡಿಟೋ 4ನೆ ಶುಕ್ರವಾರ ...	ಡಿಟೋ
6	ಲಾಲ್‌ಬಾಗ್ ,, ...	ಡಿಟೋ 7ನೆ ಸೋಮವಾರ ...	ಡಿಟೋ
7	ಕೋಟೆ ಮತ್ತು ಚಾಮರಾಜಪೇಟೆ ಡಿ॥	ಡಿಟೋ 9ನೆ ಬುಧವಾರ ...	ಡಿಟೋ
8	ಬಸವನಗುಡಿ ಡಿವೀಜ್ಞ ...	ಡಿಟೋ 11ನೆ ಶುಕ್ರವಾರ ...	ಡಿಟೋ
9	ಮಲ್ಲೇಶ್ವರ ಡಿವೀಜ್ಞ ...	ಡಿಟೋ 14ನೆ ಸೋಮವಾರ ...	ಡಿಟೋ

ಎಸ್. ಸುಬ್ಬರಾವ್,
ವೈಸ್ ಪ್ರೆಸಿಡೆಂಟ್.

ತಾರೀಖು 19ನೆ ಮಾರ್ಚಿ 1909.

ಪ್ರಕಟನ ಪತ್ರಿಕಾ.—ತೀರ್ಥಹಳ್ಳಿ ತಾಲ್ಲೂಕು ತೀರ್ಥಹಳ್ಳಿ ಕಸಬಾ ಹೋಬಳಿ ಅರಗದ ಕಸಬಾದಲ್ಲು ಇರುವ ಕೀತವ್ಮ ಕೋಂ ನಾಗಾಭಟ್ಟ ಈ ಮೂಲಕ ಸಮಸ್ತರಿಗೂ ತಿಳಿಯಪಡಿಸುವದೇನಂದರೆ :—

ತೀರ್ಥಹಳ್ಳಿ ತಾಲ್ಲೂಕು ತೀರ್ಥಹಳ್ಳಿ ಕಸಬಾ ಹೋಬಳಿ ಹಿರೆಗದ್ದೆ ಮತ್ತು ಅರಗ ಈ ಎರಡು ಗ್ರಾಮಗಳಲ್ಲಿ ಕೀತವ್ಮ ಕೋಂ ನಾಗಾಭಟ್ಟ ಎಂತ ನನ್ನ ಹೆಸರು ಖಾತೆ ಮತ್ತು ಅನುಭವ ಇರತಕ್ಕ ಮತ್ತು ಅಗ್ರಹಾರದ ಹೋಬಳಿ ಜಂಬಿತಲೂರು ಗ್ರಾಮದ ಮಜರೆ ಕುದುರೆಗೋಡಲ್ಲು ಕೋಲಹಳ್ಳಿ ಸುಬ್ಬರಾಯನ ಖಾತೆ ಪೈಕಿ ನನ್ನಹಿಸ್ಸೆ ನನ್ನ ಅನುಭವದಲ್ಲಿರತಕ್ಕ ವಿಶಿಷ್ಟ ಜಮೀನುಗಳ ಆಧಾರದಮೇಲೆ ಆಗಲಿ, ಅರಗದಪ್ಯಾಟೆಯಲ್ಲಿರುವ ನನ್ನ ಬಾಬತು ಕಾಂಪೌಂಡು ಹಿತ್ತಲು ವಗೈರೇವುಗಳಿಂದ ಕೂಡಿರುವ ಹಂಚಿನಮನೆ ನನ್ನ ಇತರ ಚರ ಆಸ್ತಿಗಳ ಆಧಾರದಮೇಲೆ ಆಗಲಿ ನನ್ನ ಕಡೆಯವನಾಗಿ ನನ್ನಪೋಷಣೆಯಲ್ಲಿರತಕ್ಕ ಅಕ್ಕಮು ನಡವಳಿತೆಯಲ್ಲಿ ಬಹು ದಿವಸಗಳಿಂದಲೂ ಇರತಕ್ಕ ಶಾಮಭಟ್ಟ ಬಿನ್ ನಾಗಭಟ್ಟ ಹಂಣಿಗಾರಿ ಈತನು ನನ್ನ ಮರಣಾವಧಿ ನನ್ನ ಬಿಪ್ಪಿಗೆ ಇಲ್ಲದೆ ಈವರಿಗೂ ಮಾಡಿರುವ ಇನ್ನು ಮುಂದೆ ಮಾಡಬಹುದಾದ ಎಲ್ಲಾವಿಧವಾದ ಸಾಲ ವಗೈರೇವುಗಳು ನಾನು ಈತಗೆ ಯಾವವಿಧವಾದ ಹಕ್ಕನ್ನು ತಹಲ್‌ವರಿಗೂ ನನ್ನ ಆಸ್ತಿ ವಿಷಯದಲ್ಲಿ ಕೊಡದೇ ಇರುವದರಿಂದ ಎಪ್ಪರವಟ್ಟಿಗೂ ಸ್ವಲ್ಪವೂ ಲಗಾವ್ ಆಗತಕ್ಕದ್ದಲ್ಲವಾಗಿವೆ. ಈ ಅಕ್ಕಮು ನಡವಳಿತೆಯಲ್ಲಿರುವ ಸದರಿ ಶಾಮಭಟ್ಟಗೆ ಯಾರೊಬ್ಬರೂ ನನ್ನ ಈ ಮೇಲೆ ನಮೂದಿಸಿದ ಆಸ್ತಿಗಳ ಆಧಾರದಮೇಲೆ ಸಾಲಾ ವಗೈರೆ ಕೊಡಕೂಡದೆಂದು ಕೀತವ್ಮ ಕೋಂ ನಾಗಾಭಟ್ಟನಾದ ನಾನು ಈ ಮೂಲಕ ಪ್ರಸಿದ್ಧಪಡಿಸಿರುತ್ತೇನೆ.